ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಡಿಗ್ರಿ ಕಾಲೇಜುಗಳು—೫೦

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ್ದು	— ೧
ಬೆಂಗಳೂರು ವಿಶ್ವವಿದ್ಯಾನಿಲಯ	— ೧
ಸರ್ಕಾರದ್ದು	— ೨
ಖಾಸಗಿ ಅನುದಾನಿತ	— ೮
ಖಾಸಗಿ ಅನುದಾನ ರಹಿತ	—೩೪
ಒಟ್ಟು	೪೬

ಸಂಜೆ ಕಾಲೇಜುಗಳು

ಬೆಂಗಳೂರು ವಿಶ್ವವಿದ್ಯಾನಿಲಯ	— ೧
ಖಾಸಗಿ ಅನುದಾನಿತ	— ೩
ಒಟ್ಟು	೫೦

ಡಿಪ್ಲೊಮೊ ಸಂಸ್ಥೆಗಳು—೧೭೬

ಸರ್ಕಾರಿ	—೩೩
ಖಾಸಗಿ ಅನುದಾನಿತ	— ೮
ಖಾಸಗಿ ಅನುದಾನ ರಹಿತ	—೧೩೫
ಒಟ್ಟು	೧೭೬

ಸಾಮಾಜಿಕ ಅರಣ್ಯ ಯೋಜನೆ

೩೪೯ (೫೫೯) ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).— ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಸರ್ಕಾರವು ಖರ್ಚು ಮಾಡಿದ ಒಟ್ಟು ಹಣವೆಷ್ಟು ?

ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸಾಮಾಜಿಕ ಅರಣ್ಯ ಯೋಜನೆಗೆ ಸಂಬಧಿಸಿದ ಸಸ ಕ್ಷೇತ್ರಗಳಲ್ಲಿ ಬೆಳಸಿದ ಒಟ್ಟು ಸಸಿಗಳ ಸಂಖ್ಯೆ ಎಷ್ಟು?

ಇ) ಒಟ್ಟು ಜನತೆಗೆ ಹಂಚಿದ ಸಸಿಗಳು ಎಷ್ಟು ?

ಈ) ಅದರಲ್ಲಿ ಎಷ್ಟು ಸಸಿಗಳನ್ನು ಮಂದಗಳನ್ನಾಗಿ ಬೆಳೆಸಲು ಉಪಯೋಗಿಸಲಾಗಿದೆ ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ರೂ.೪೬೦–೭೭ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ೧೯೮೫–೮೬ ರಿಂದ ಡಿಸೆಂಬರ್ ೧೯೮೮ರವರೆಗೆ ೨೫.೩೩ ಕೋಟಿ ಸಸಿಗಳನ್ನು ಬೆಳಸಲಾಗಿದೆ.

ಇ) ೧೯೮೫–೮೬ — ೮೫೦ ಲಕ್ಷ
೧೯೮೬–೮೭ — ೭೩೨ ಲಕ್ಷ
೧೯೮೭–೮೮ — ೪೯೦ ಲಕ್ಷ
ಒಟ್ಟು ೨೦೭೨ ಲಕ್ಷ

ಈ) ಸಾಮಾನ್ಯವಾಗಿ ಶೇಕಡ ೬೦ರಿಂದ೭೦ ರಷ್ಟು

ಕೊಡಗು ಜಿಲ್ಲೆಯಲ್ಲಿ ಮರಗಳ ತೊಗಟೆಗಳು ಕಳ್ಳಸಾಗಾಣಿಕೆ

೩೫೦ (೫೦೦) ಶ್ರೀ ಡಿ. ಎ. ಚಿನ್ನಪ್ಪ (ಪೊಡಿಕೇರಿ).—ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೊಡಗು ಜಿಲ್ಲೆಯಲ್ಲಿ ಮರಗಳ ತೊಗಟೆಗಳು ಕಳ್ಳಸಾಗಾಣಿಕೆಯಾಗುತ್ತಿರುವುದು ನಿಜ ಸಂಗತಿಯಾಗಿದೆಯೇ ?

ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮೊಕದ್ದಮೆಗಳನ್ನು ಪತ್ತೆ ಹಚ್ಚಲಾಗಿದೆ ? ಮತ್ತು ಎಷ್ಟು ವಾಹನಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ?

ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪ್ರಮಾಣದ ತೊಗಟೆಯನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು).

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ಹೌದು.

ಆ) ವರ್ಷವಾರು ಮಾಹಿತಿಯು ಈ ಕೆಳಕಂಡಂತಿದೆ :—

ವರ್ಷ	ಮೊಕದ್ದಮೆ ಕೊಡಗು ಜಿಲ್ಲೆ	ಅಮಾನತ್ತು ಪಡಿಸಿದ ವಾಹನಗಳ ಸಂಖ್ಯೆ
೧೯೮೬–೮೭	೯	೮
೧೯೮೭–೮೮	೨೩	೬
೧೯೮೮–೮೯	೪೭	೨೫
ಒಟ್ಟು	೭೯	೩೯